## 10. ಗಮನ ಸೆಳೆಯುವ ಸೂಚನೆ

(ಅ) ವಿಷಯ: ಸೊರಬ ತಾಲ್ಲೂಕಿನ ಗಿರಿಜನ ಉಪಯೋಜನೆ ಯಡಿಯಲ್ಲಿ 2004–05ನೇ ಸಾಲಿನ ಹೆಚ್ಚುವರಿ ಅನುದಾನದಲ್ಲಿ ಅನುಷ್ಠಾನ ಗೊಳಿಸಬೇಕಾದ ಕಾರ್ಯಕ್ರಮದ ಕ್ರಿಯಾ ಯೋಜನೆಯಲಿನ ಲೋಪದೋಷಗಳ ಬಗ್ಗೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ(ಸೊರಬ): ಮಾನ್ಯ ಅಧ್ಯಕ್ಷರೆ, ಸೊರಬ ತಾಲ್ಲೂಕಿನ ಗಿರಿಜನ ಉಪ ಯೋಜನೆಯಡಿಯಲ್ಲಿ 2004–05ನೇ ಸಾಲಿನ ಹೆಚ್ಚುವರಿ ಅನುದಾನದಲ್ಲಿ ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮದ ಕ್ರಿಯಾ ಯೋಜನೆಯಲ್ಲಿನ ಲೋಪದೋಷಗಳ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: (ಮಾನ್ಯ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತೇನೆ.

ಪರಿಶಿಷ್ಟ ವರ್ಗದವರ ಅಭಿವೃದ್ಧಿಗೆ ಕೇಂದ್ರವಲಯ ಯೋಜನೆಯಡಿ ಭಾರತ ಸರ್ಕಾರದ ಗಿರಿಜನ ವ್ಯವಹಾರಗಳ ಮಂತ್ರಾಲಯವು ವಿಶೇಷ ಕೇಂದ್ರೀಯ ಸಹಾಯಧನ ಮತ್ತು ಭಾರತ ಸಂವಿಧಾನ ಅನುಚ್ಛೇಧ 275(1) ರಡಿ ಆರ್ಥಿಕ ಉನ್ನತಿ ಕಾರ್ಯಕ್ರಮಗಳು ಹಾಗೂ ಪರಿಶಿಷ್ಟ ವರ್ಗದ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲು ಕೇಂದ್ರೀಯ ನೆರವನ್ನು ಮಂಜೂರು ಮಾಡುತ್ತಿದೆ. ಭಾರತ ಸರ್ಕಾರದ ಪತ್ರ ಸಂಖ್ಯೆ 14020/1/2004 ಎಸ್.ಜಿ. ಅಂಡ್ ಸಿ ದಿನಾಂಕ 19.1.2004 ಮತ್ತು ಮಾರ್ಗಸೂಚಿ ಸಂಖ್ಯೆ. 14020/5/2003 – ಎಸ್.ಜಿ. ಅಂಡ್ ಸಿ. ದಿನಾಂಕ 2.5.2003 ಮತ್ತ 14011/9/2001 – ಎಸ್.ಜಿ. ಅಂಡ್ ಸಿ ದಿನಾಂಕ 2.7.2002ರ ಪ್ರಕಾರ ಕೇಂದ್ರೀಯ ನೆರವಿನ ಕಾರ್ಯಕ್ರಮಗಳನ್ನು ಕ್ಲಸ್ಟರ್ ಮಾದರಿಯಲ್ಲಿ ಅನುಷ್ಠಾನಗೊಳಿಸಬೇಕಾಗಿರುತ್ತದೆ.

2004–05ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದವರ ಜನಸಂಖ್ಯೆ ಹೆಚ್ಚಾಗಿರುವ ಪ್ರದೇಶಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿಶೇಷ ಕೇಂದ್ರೀಯ ನೆರವಿನಡಿ ಹೆಚ್ಚುವರಿಯಾಗಿ ರೂ.200.00 ಲಕ್ಷಗಳು ಮತ್ತು ಭಾರತ ಸಂವಿಧಾನ ಅನುಚ್ಛೇಧ 275(1)ರಡಿ ರೂ.400.00 ಲಕ್ಷಗಳನ್ನು ಮಂಜೂರು ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರವು

ವಿಶೇಷ ಕೇಂದ್ರೀಯ ನೆರವಿನಡಿ ರೂ.205.78 ಲಕ್ಷಗಳು ಮತ್ತು ಭಾರತ ಸಂವಿಧಾನ ಅನುಚ್ಛೇಧ 275(1)ರಡಿ ರೂ.187.88 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ. ಈ ಪೈಕಿ, ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಲ್ಲಿ ಕೆಳಕಂಡ ಕಾರ್ಯಕ್ರಮಗಳಿಗೆ ಸರ್ಕಾರದ ಆದೇಶ ಸಂಖ್ಯೆ ಸಕಇ 415 ಪವಯೋ 2005 ದಿನಾಂಕ 27.1.2006ರಲ್ಲಿ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಗೆ ಅನುದಾನ ಬಿಡುಗಡೆಯಾಗಿರುತ್ತದೆ.

**ಅ. ಭಾರತ ಸಂವಿಧಾನ ಅನುಚ್ಛೇದ 275(1):**

| ಕ್ರ. ಸಂ. | ಕಾರ್ಯಕ್ರಮ | ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳು |
|---|---|---|
| 1 | ಸೊರಬ ತಾಲ್ಲೂಕಿನ ಬಿಳಗಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಕಾಲೋನಿಯಲ್ಲಿ ಗ್ರಾಮ ನೈರ್ಮಲ್ಯ ಕಾರ್ಯಕ್ರಮ | 3.50 |
| 2 | ಸೊರಬ ತಾಲ್ಲೂಕಿನ ಬಿಳಗಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಕ್ರಮ | 2.00 |
| 3 | ಸೊರಬ ತಾಲ್ಲೂಕಿನ ಬಿಳಗಲಿ ಗ್ರಾಮದಲ್ಲಿ ಪರಿಶಿಷ್ಟ ವರ್ಗದ ವರಿಗೆ ಸಮುದಾಯ ಭವನ ನಿರ್ಮಾಣ | 5.00 |
| | ಒಟ್ಟು | **10.50** |

ಮುಂದುವರಿದು, ಸರ್ಕಾರದ ಆದೇಶ ಸಂಖ್ಯೆ ಸಕಇ 221 ಪವಯೋ 2005 ದಿನಾಂಕ 12.8.2005ರಂದು ವಿಶೇಷ ಕೇಂದ್ರೀಯ ಸಹಾಯಧನದಡಿ ಸೊರಬ ತಾಲ್ಲೂಕಿಗೆ ರೂ.4.65 ಲಕ್ಷಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಬಿಡುಗಡೆ ಮಾಡಿದ್ದು, ಈ ಹಣವನ್ನು ನಿರ್ದೇಶಕರ ಕಛೇರಿ ಆದೇಶ ಸಂಖ್ಯೆ ಪವಕನಿ:ಗಿಉಯೋ:ಸಿಆರ್ 8:2004–05 (ಭಾಗ), ದಿನಾಂಕ 21.9.2005ರಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಶಿವಮೊಗ್ಗ ಇವರಿಗೆ ಮರು ಬಿಡುಗಡೆ ಮಾಡಲಾಗಿರುತ್ತದೆ.

5.30 ಪಿಎಂ

ಅ. ವಿಶೇಷ ಕೇಂದ್ರೀಯ ಸಹಾಯಧನ:

| ಕ್ರ. ಸಂ. | ಕಾರ್ಯಕ್ರಮ | ಬಿಡುಗಡೆಯಾದ ಮೊತ್ತ (ಲಕ್ಷ ರೂ.ಗಳು |
|---|---|---|
| | ಸೊರಬ ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗದ ವರಿಗೆ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು | |
| ಅ. | ಯಾಂತ್ರೀಕೃತ ಕೃಷಿ ಉಪಕರಣಗಳ ಸರಬರಾಜು | 1.00 |
| ಆ. | ಪಶುಸಂಗೋಪನೆ | 3.00 |
| ಇ. | ಸ್ವಯಂ ಉದ್ಯೋಗ ಯೋಜನೆ | 0.20 |
| ಈ. | ತೋಟಗಾರಿಕೆ ಅಭಿವೃದ್ಧಿ | 0.45 |
| | ಒಟ್ಟು | 4.65 |

ಭಾರತ ಸರ್ಕಾರದ ಮಾರ್ಗಸೂಚಿ ಸಂಖ್ಯೆ... ಭಾರತ ಸರ್ಕಾರದ ಪತ್ರ ಸಂಖ್ಯೆ: 14020/1/2004 ಎಸ್.ಜಿ. ಅಂಡ್ ಸಿ ದಿನಾಂಕ 19.1.2004ರ ಪ್ರಕಾರ ಕೇಂದ್ರೀಯ ನೆರವಿನ ಕಾರ್ಯಕ್ರಮಗಳನ್ನು ಕ್ಲಸ್ಟರ್ ಮಾದರಿಯಲ್ಲಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ, ಪರಿಶಿಷ್ಟ ವರ್ಗದವರು ಅಧಿಕ ಸಂಖ್ಯೆಯಲ್ಲಿ ವಾಸಿಸುವ ಹಿಂದುಳಿದ ಗ್ರಾಮಗಳನ್ನು ಕ್ಲಸ್ಟರ್‌ಗಳಾಗಿ ಆಯ್ಕೆ ಮಾಡಿಕೊಂಡು, ಕಾರ್ಯಕ್ರಮಗಳನ್ನು ರೂಪಿಸಿ, ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ಅನುಮೋದನೆಯನ್ನು ಪಡೆದು, ಕಾರ್ಯಕ್ರಮಗಳನ್ನು ಜಿಲ್ಲಾ ಪಂಚಾಯತ್ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

**ಶ್ರೀ ಎಸ್. ಕುಮಾರ್ ಬಂಗಾರಪ್ಪ:** ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿರುವ ಗಮನ ಸೆಳೆಯುವ ಸೂಚನೆಯಲ್ಲಿ in particular ಕ್ರಿಯಾ ಯೋಜನೆಯ ಲೋಪದೋಷಗಳ ಬಗ್ಗೆ ಕೇಳಿದ್ದೆ. ಇಲ್ಲಿ ನಾನು ಕಾರ್ಯಕ್ರಮದ ಬಗ್ಗೆ ಕೇಳಲಿಲ್ಲ. ಮಾನ್ಯ ಸಚಿವರು ಕಾರ್ಯಕ್ರಮದ ಬಗ್ಗೆ ಹೇಳಿದ್ದಾರೆ. ಇದಕ್ಕಿಂತ ಮುಂಚಿತವಾಗಿ ಮಾನ್ಯ ಸಚಿವರಿಗೆ ನಾನು ಪತ್ರವನ್ನು ಬರೆದು ಕ್ರಿಯಾ ಯೋಜನೆಯಲ್ಲಿ ಲೋಪ ದೋಷವೇನಾಗಿದೆ ಎನ್ನುವುದನ್ನೂ ಸಹ ತಿಳಿಸಿದೆ. ಆ

ರೀತಿ ತಿಳಿಸಿದಂಥ ಸಂದರ್ಭದಲ್ಲಿ ಅವರು ಈ ಫೈಲನ್ನು ವಾಪಸ್ ತರಿಸುತ್ತೇನೆಂದು ಬರೆದು ಕಾರ್ಯದರ್ಶಿಯವರಿಗೆ ಕಳುಹಿಸಿದರು. ಅನಂತರ ನಾನು ಕಾರ್ಯದರ್ಶಿಯವರೊಂದಿಗೂ ಮಾತನಾಡಿದೆ. ಇಲ್ಲಿ ಮುಖ್ಯವಾಗಿ ನೀವು ಹೇಳಬೇಕಾದರೆ, ಇಲ್ಲಿ ಹೆಚ್ಚಿನ ಜನಸಂಖ್ಯೆಯ ಆಧಾರದ ಮೇಲೆ ಆ ಪ್ರದೇಶಗಳಿಗೆ ಕಾರ್ಯಕ್ರಮವನ್ನು ಮಾಡಬೇಕೆಂದು ಹೇಳಿದ್ದೆ. ನಮ್ಮ ತಾಲ್ಲೂಕಿನಲ್ಲಿರತಕ್ಕ ಬಿಳಿಗಲಿ ಗ್ರಾಮವೇನಿದೆ ಇದು ಎಸ್.ಟಿ. ಕಾರ್ಪೊರೇಷನ್‌ನ ಡೈರೆಕ್ಟರ್‌ರವರ ಊರು. ಇವರು ಏನು ಮಾಡುತ್ತಾರೆಂದರೆ ಪ್ರತಿ ಸಲವೂ ಯಾವುದಾದರೂ ಒಂದು ಕಾರ್ಯಕ್ರಮ ಬಂದರೆ ಜನಸಂಖ್ಯೆ ಇರತಕ್ಕ ಊರುಗಳನ್ನು ಬಿಡುತ್ತಾರೆ, ಜನಸಂಖ್ಯೆ ಇಲ್ಲದೆ ಇರತಕ್ಕ ಊರುಗಳಿಗೆ ಕಾರ್ಯಕ್ರಮವನ್ನು ತೆಗೆದುಕೊಂಡು ಹೋಗುತ್ತಾರೆ. ಮೊನ್ನೆ ಸಿ.ಎಂ.ಜೆ.ಎಸ್.ವೈ ಕಾರ್ಯಕ್ರಮದಲ್ಲಿ ಮಾಡಿದಾಗ ನಾವೆಲ್ಲಾ ಏನು ಮಾಡಿದೆವು, ಸರ್ಕಾರ ಏನು ಭರವಸೆಯನ್ನು ಕೊಟ್ಟಿತು? ಇದನ್ನೆಲ್ಲಾ ಸರಿಪಡಿಸುತ್ತೇವೆ ಎಂಬ ಆಶ್ವಾಸನೆಯನ್ನು ಕೊಟ್ಟಿತ್ತು. ಈಗ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ಅವರಿಗೆ ಮುಂದಾಲೋಚನೆ, ತಾವು electionಗೆ ನಿಲ್ಲಬೇಕೆಂದೋ, ಅಥವಾ ಏನು ವಿಚಾರಗಳು ಇದೆಯೋ ಗೊತ್ತಿಲ್ಲ. ಯಾವ ಗ್ರಾಮದಲ್ಲಿ ಎಸ್.ಟಿ.ಯ ಜನಸಂಖ್ಯೆ ಇದೆಯೋ ಅದನ್ನು ಬಿಟ್ಟು ಅವರ ಊರಿಗೆ ತೆಗೆದುಕೊಂಡು ಹೋಗಿ ಇದನ್ನು ಹಾಕಿಕೊಳ್ಳತಕ್ಕ ವ್ಯವಸ್ಥೆ ಮಾಡಿದರು. ಇದು ಜನಸಂಖ್ಯೆಗೆ ಅನುಗುಣವಾಗಿ ಕೇಂದ್ರ ಸರ್ಕಾರ ಕೊಡತಕ್ಕ ಕಾರ್ಯಕ್ರಮದಲ್ಲಿ, ಜನಸಂಖ್ಯೆಯ ಆಧಾರದ ಮೇಲೆ ಮಾಡಿ ಎಂದು ಕೆ.ಡಿ.ಪಿ. ಸಭೆಯಲ್ಲೂ ಹೇಳಿದ್ದೇವೆ. ಸಬ್‌ಸಿಕ್ವೆಂಟ್ ಆಗಿ ವೈಯಕ್ತಿಕವಾಗಿ ಬರತಕ್ಕ ಫಲಾನುಭವಿಗಳನ್ನು ಪಟ್ಟಿ ಮಾಡಬೇಕಾದರೆ ಅಲ್ಲಿ ಜನಸಂಖ್ಯೆಯೇ ಸಿಗಲಿಲ್ಲ ಎಂದು ಫಲಾನುಭವಿಗಳ ಪಟ್ಟಿಯನ್ನು ಮಾಡುವುದ ಕ್ಕಾಗಲಿಲ್ಲ. ಈ ಕಡೆ ಸರ್ಕಾರದ ಕಾರ್ಯಕ್ರಮವೆಂದು ಅನುಷ್ಠಾನ ಮಾಡುವುದಕ್ಕೂ ಆಗುವುದಿಲ್ಲ. ಸಬ್‌ಸಿಕ್ವೆಂಟ್ ಆಗಿ ಇವರು ಮತ್ತೆ ಕಾರ್ಯಕ್ರಮ ವನ್ನು ಯಾವುದೇ ಕಾರಣಕ್ಕೂ ಹಿಂದೆ ತೆಗೆದುಕೊಳ್ಳಲು ಆಗುವುದಿಲ್ಲವೆಂದು ಆರ್ಡರ್‌ನ್ನೂ ಸಹ ಕಳುಹಿಸುತ್ತಾರೆ. ಸಚಿವರು ಆ ಫೈಲ್‌ನ್ನು ರೀಕಾಲ್ ಮಾಡಿದ ಮೇಲೆ ಅಧಿಕಾರಿಗಳು ಈ ರೀತಿ ವರ್ತನೆ ಮಾಡಿ ಈ ಕಾರ್ಯಕ್ರಮ ಅನುಷ್ಠಾನಕ್ಕೆ ಬಾರದೆ ಇರುವ ರೀತಿಯಲ್ಲಿ ಸುಮಾರು ಮೂರ್ನಾಲ್ಕು ತಿಂಗಳಿನಿಂದ ಪೆಂಡಿಂಗ್ ಉಳಿದುಕೊಂಡಿದೆ. ಜನಸಂಖ್ಯೆಗೆ ಅನುಗುಣವಾಗಿ ಕಾರ್ಯಕ್ರಮ ಬಂದಂಥ ಸಂದರ್ಭದಲ್ಲಿ ಬೇರೆ ಊರಿನವರು ಈಗ ನನಗೆ ಅರ್ಜಿಯನ್ನು ಕೊಟ್ಟು ಕಳುಹಿಸಿದ್ದಾರೆ. ಆ ಊರಿನಲ್ಲಿ ಜನಸಂಖ್ಯೆ ಇಲ್ಲದಿದ್ದರೂ ಕೂಡ

ಕಾರ್ಯಕ್ರಮವನ್ನು ಅಲ್ಲಿ ಹೇಗೆ ಅನುಷ್ಠಾನಕ್ಕೆ ಕೊಟ್ಟಿರಿ? ನಮ್ಮ ಗ್ರಾಮಗಳ ಹೈಯಸ್ಟ್ ಪಾಪ್ಯುಲೇಷನ್ ಇರತಕ್ಕ ಕಡೆಗಳಲ್ಲಿ ಮಾಡಬೇಕೆಂದು ಕಾನೂನಿನಲ್ಲಿ ಇರಬೇಕಾದರೆ ನೀವು ಹೇಗೆ ಅದನ್ನು ಅನುಷ್ಠಾನಕ್ಕೆ ಮಾಡುತ್ತೀರಿ ಎಂದು ಮಾತನಾಡುತ್ತಾರೆ. ಈಗ ಇದನ್ನು ಯಾವ ರೀತಿಯಾಗಿ ಮಾಡುತ್ತೀರಿ ಎಂಬ ಬಗ್ಗೆ ಸರ್ಕಾರ ನಮಗೆ ಕ್ಲಾರಿಫಿಕೇಷನ್ ಕೊಡಬೇಕು. It is not a new thing. ಇದನ್ನು ನಾನು ಪದೇ ಪದೇ ಹೇಳಿದ್ದೇನೆ. ನಾನು ಮಾನ್ಯ ಸಚಿವರಿಗೂ ಪತ್ರವನ್ನು ಬರೆದೆ. ಪ್ರಧಾನ ಕಾರ್ಯದರ್ಶಿಯವರಿಗೂ ಪತ್ರವನ್ನು ಬರೆದೆ. ಡೈರೆಕ್ಟರ್‌ಗೆ ಪತ್ರವನ್ನು ಬರೆದೆ. ಇದಕ್ಕೆ ಎಲ್ಲಾ ಮಾಹಿತಿಯನ್ನು ಕೊಟ್ಟೆ, ಯಾವ ಗ್ರಾಮಗಳಿಗೆ ಅತಿ ಹೆಚ್ಚಿನ ಜನಸಂಖ್ಯೆ ಇದೆಯೋ ಅಲ್ಲಿ ಮಾಡಬೇಕೆಂದು ಗೈಡ್‌ಲೈನ್ಸ್ ಏನಿದೆಯೋ ಆ ರೀತಿ ಮಾಡಿ ಎಂದು ಸ್ಪಷ್ಟವಾಗಿ ಕೆ.ಡಿ.ಪಿ.ಯಲ್ಲಿ ಸಹ ರೆಸುಲೂಷನ್ ಮಾಡಿದ್ದೇವೆ. ಮಾನ್ಯ ಸಚಿವರು ಇದಕ್ಕೆ ಮಾಹಿತಿಯನ್ನು ಒದಗಿಸಿಕೊಂಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು):** ಮಾನ್ಯ ಉಪಾಧ್ಯಕ್ಷರೆ, ನಾನೂ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಏನು ಮಾನ್ಯ ಕುಮಾರ್‌ಬಂಗಾರಪ್ಪನವರು ವಿಚಾರ ವ್ಯಕ್ತ ಮಾಡಿದ್ದಾರೆ, ಇದಕ್ಕೆ ಕಮಿಟ್‌ಮೆಂಟ್ ಬೇಕಾಗುತ್ತದೆ. ಈ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಆ ಭಾಗದಲ್ಲಿರತಕ್ಕ ಜನರೇನಿದ್ದಾರೆ, ಅವರ ಸಲುವಾಗಿ ಕೇಂದ್ರದಿಂದ ಬರತಕ್ಕ ಹಣವೇನಿದೆ ಅದನ್ನು ಉಪಯೋಗ ಮಾಡತಕ್ಕ ರೀತಿಯಲ್ಲಿ, ಮಾನ್ಯ ಮುಖ್ಯಮಂತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆಯಾಗಬೇಕು, ತಾವಾಗಲಿ ಅಥವಾ ಯಾರಾಗಲಿ ಮಾಡಲೇ ಬೇಕು. ನಾನು ಮುಖ್ಯಮಂತ್ರಿಯಾದಾಗ ಇದಕ್ಕೆ ಸಂಬಂಧಪಟ್ಟ ಕೇಂದ್ರದ ಮಂತ್ರಿಗಳು ಬಂದಿದ್ದರು. ಆಗ ನಮ್ಮ ಪ್ರಧಾನ ಕಾರ್ಯದರ್ಶಿ ಎಸ್.ವಿ. ರಂಗನಾಥ್ ಮುಖ್ಯ ಕಾರ್ಯದರ್ಶಿಯವರು ಹಾಗೂ ಇಲಾಖೆಯ ಮುಖ್ಯಸ್ಥರ ಒಂದು ದೊಡ್ಡ ಸಭೆಯನ್ನು ಮಾಡಿದರು. ಅಲ್ಲಿರತಕ್ಕ ಡೈರೆಕ್ಟರ್ ಏನಿದ್ದಾರೆ ಅವರಿಗೆ ಏನೂ ಗೊತ್ತೇ ಇಲ್ಲ. ಏನು ನಮ್ಮ ಕುಮಾರ್ ಬಂಗಾರಪ್ಪನವರು ಸೊರಬ, ಶಿವಮೊಗ್ಗ ಮತ್ತು ಬೇರೆ ಕಡೆಯಲ್ಲಿ ಅವರ ಮತ ಕ್ಷೇತ್ರದಲ್ಲಿರುವ ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ, ಜಿಲ್ಲಾ ಪಂಚಾಯಿತಿಯ ಕಾರ್ಯದರ್ಶಿಯವರಿಗೆ ಅದು ಗೊತ್ತೇ ಆಗುವುದಿಲ್ಲ. ಸಾಮಾನ್ಯ ಕಾರ್ಯಕ್ರಮದ ಬಗ್ಗೆ ಅವರು ಲಕ್ಷ ಕೊಡುವುದಿಲ್ಲ. ಅದಕ್ಕೆ ಸಪರೇಟ್ ಡೈರೆಕ್ಟರೇಡ್ ಮಾಡಬೇಕೆಂದು ಮಾಡಿದ್ದೇವೆ. ಕೇಂದ್ರದಿಂದ ಹಣವನ್ನು ತಂದು ಇಂಥ ಜನತೆಗೆ ಸಹಾಯ ಮಾಡತಕ್ಕ ರೀತಿಯಲ್ಲಿ

ವಿಶೇಷವಾದ ರೀತಿಯಲ್ಲಿ ನಾವು ಅದಕ್ಕೆ ಗಮನ ಕೊಡಬೇಕಾಗುತ್ತದೆ. That requires commitment. Commitment ಇಲ್ಲವೆಂದರೆ ಕೆಲಸವಾಗುವುದಿಲ್ಲ. ಆದ್ದರಿಂದ ಅವರು ಬಹಳ ನೊಂದ ಮನಸ್ಸಿನಿಂದ ಇದನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಸಂಬಂಧಪಟ್ಟ ಎಲ್ಲಾ ಜನರು ಕೆಲಸ ಮಾಡಬೇಕಾಗುತ್ತದೆ. ಜಿಲ್ಲಾ ಪಂಚಾಯಿತಿಯಲ್ಲಿ ಹೇಗೆ ಕೆಲಸ ನಡೆಯುತ್ತಿದೆ ಎಂಬುದು ತಮಗೆ ಗೊತ್ತಿದೆ. You are also Rural Development Minister ಆಗಿ ಸಾಕಷ್ಟು ಕೆಲಸ ಮಾಡಿದ್ದೀರಿ, ಅನುಭವವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಟ್ರೈಬಲ್ ಜನರೇನಿದ್ದಾರೆ.. ಇದಕ್ಕೆ ಈಗಾಗಲೆ ಸಪರೇಟ್ ಡೈರೆಕ್ಟರೇಟ್‌ನ್ನು ಮಾಡಿದ್ದೇವೆ. ಇದಕ್ಕೆ ಹೆಚ್ಚಿನ ಗಮನ ಕೊಡತಕ್ಕ ರೀತಿಯಲ್ಲಿ ಕಾಳಜಿ ವಹಿಸಬೇಕು. ಮಾನ್ಯ ಎಸ್.ಎಂ. ಕೃಷ್ಣರವರು ರಾಜ್ಯದ ಮುಖ್ಯ ಮಂತ್ರಿಯಾದಾಗ ಹೆಗ್ಗಡದೇವನ ಕೋಟೆಯಲ್ಲಿ ವಿಶೇಷವಾದ ಸಂಪುಟದ ಸಭೆಯನ್ನು ನಡೆಸಿದ್ದಾರೆ. ಈ ರೀತಿಯಾಗಿ ಸಮಸ್ಯೆಗಳನ್ನು ತಿಳಿದು ಅದಕ್ಕೆ ಹೆಚ್ಚಿನ ಒತ್ತುಕೊಡಬೇಕು. ನಾವು ಹೇಳಬೇಕು ಎಂದು ದಾಖಲೆಯಲ್ಲಿ ಹೋಗತಕ್ಕದ್ದಲ್ಲ. ತಾವು ಈ ಇಲಾಖೆಯ ಸಚಿವರಾಗಿ ಬಂದಿದ್ದೀರಿ. ಅನುಭವ ಇದೆ. ಆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸಂಬಂಧಪಟ್ಟ ಶಾಸಕರ ವಿಚಾರಗಳನ್ನು ಪಡೆದು ಇದಕ್ಕೆ ಯಾವ ರೀತಿಯಾಗಿ effective ಆಗಿ ಇಂಪ್ಲಿಮೆಂಟ್ ಮಾಡಬೇಕು ಎಂಬ ಬಗ್ಗೆ ಕ್ರಮ ತೆಗೆದುಕೊಳ್ಳಿ.

**ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಮತ್ತು ಹಿರಿಯ ಮುಖಂಡರು ಹಾಗೂ ವಿರೋಧ ಪಕ್ಷದ ನಾಯಕರು ಹೇಳಿರುವಂಥ ಸಲಹೆ ಏನಿದೆ, ಅದು ಬಹಳ ಸೂಕ್ತವಾಗಿರತಕ್ಕದ್ದು. census of India 2001 ಕೊಟ್ಟಿರತಕ್ಕ ಪಾಪ್ಯುಲೇಷನ್ ಪ್ರೊಫೈಲ್ ನಮ್ಮ ಹತ್ತಿರ ಇದೆ. ಆದರೆ ಅವರು ಏನು ಮೂಲಭೂತವಾದ ಪ್ರಶ್ನೆಯನ್ನು ಎತ್ತಿದ್ದಾರೆ, ನೀವು ಹಣವನ್ನೇನು ಖರ್ಚು ಮಾಡಿದ್ದೀರಿ ಎಂಬುದಕ್ಕಿಂತ ಹೆಚ್ಚಾಗಿ ಬಹಳ ಕಡಿಮೆ ಜನಸಂಖ್ಯೆ ಇರತಕ್ಕ ಊರುಗಳಿಗೆ ಕೊಟ್ಟಿದ್ದೀರಿ, ಲೋಪದೋಷಗಳಿವೆ ಅದನ್ನು ಸರಿಪಡಿಸಿ ಎಂಬುದರ ಬಗ್ಗೆ ನಮ್ಮ ಉತ್ತರದಲ್ಲಿ ಸ್ವಲ್ಪ ಮಾಹಿತಿಯನ್ನು ಕೊಡಬೇಕಾಗಿತ್ತು, ಅದನ್ನು ಕೊಟ್ಟಿಲ್ಲ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರೇನು ಸಲಹೆ ಕೊಟ್ಟಿದ್ದಾರೆ, ಇದನ್ನು ಅನುಷ್ಟಾನಗೊಳಿಸತಕ್ಕದ್ದು ಲೋಪದೋಷ ಸರಿಪಡಿಸತಕ್ಕದ್ದು ಮತ್ತು ಹೆಚ್ಚು ಚುರುಕಾಗಿ ಕೆಲಸ ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬಂದ ತಕ್ಷಣವೇ ಆ ವಿಷಯವನ್ನು

ಚರ್ಚೆ ಮಾಡಿ ಬಹುಶಃ ಎರಡು ಮೂರು ದಿವಸದೊಳಗೆ ಈ ವಿಚಾರಕ್ಕೆ ಸಂಬಂಧಪಟ್ಟ ಶಾಸಕರುಗಳನ್ನು ಕರೆಸಿ, ನಿರ್ದೇಶಕರು ಮತ್ತು ಅಧಿಕಾರಿಗಳನ್ನು ಕರೆಸಿ ಇದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆ ಪ್ರಕಾರ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರ್ ಬಂಗಾರಪ್ಪನವರು ಎತ್ತಿರುವ ವಿಚಾರದಲ್ಲಿ ಸತ್ಯವಿದೆ. ಇನ್ನೊಂದು ಕಡೆ ಯಾವುದೇ ಸ್ಕೀಮ್ ಅನುಷ್ಠಾನವಾಗಬೇಕೆಂದರೆ, ಒಂದು ಕಡೆ ಶಾಸಕರನ್ನು ಕೇಳುತ್ತಾರೆ, ಇನ್ನೊಂದು ಕಡೆ ಅಧಿಕಾರಿಗಳೇ ಲಿಸ್ಟ್ ಮಾಡಿಬಿಟ್ಟು ನಮ್ಮ ಹತ್ತಿರ ಸಹಿ ಮಾಡಿಸಿಕೊಂಡು ಬನ್ನಿ ಎಂದು ಕಳುಹಿಸುತ್ತಾರೆ, ಇಲ್ಲದಿದ್ದರೆ ನಮ್ಮನ್ನು ಕೇಳುವುದನ್ನು ಬಿಟ್ಟುಬಿಡಲಿ. ನಾವು ಒಂದು ಪಟ್ಟಿ ಕೊಟ್ಟಿರುತ್ತೇವೆ, ನಮ್ಮ ಹತ್ತಿರ ಒಂದು ಪಟ್ಟಿಯನ್ನು ತೆಗೆದುಕೊಂಡಿರುತ್ತಾರೆ, ಆ ಪಟ್ಟಿ ಅನುಷ್ಠಾನ ಮಾಡಬೇಕು ಎನ್ನುವುದರ ಮೊದಲು ಇಲ್ಲಾ, ಇಲ್ಲಾ ಅಲ್ಲಿಂದಲೇ ಕೊಟ್ಟುಬಿಟ್ಟಿದ್ದಾರೆ ಈ ಪಟ್ಟಿಗೂ ನೀವು ಸಹಿ ಮಾಡಿಕೊಡಿ ಎಂಬ ಸ್ಥಿತಿ ನಿರ್ಮಾಣವಾಗಿದೆ. ನಮ್ಮ ಗಮನಕ್ಕೆ ಬಾರದೆ ನಮಗೆ ಗೊತ್ತಿಲ್ಲದೆಯೇ ಇಲ್ಲಿಂದಲೇ ಸ್ಕೀಮ್‌ಗಳಿಗೆ ಅಪ್ರೂವಲ್ ಕೊಡುವುದು, ಇಲ್ಲಿಂದಲೆ ಸಬ್ಸಿಡಿ ರಿಲೀಸ್ ಮಾಡುವುದು. ಇದಕ್ಕೆ ನೀವು ಎಲ್ಲಾದರೂ ಕಡಿವಾಣವನ್ನು ಹಾಕಬೇಕು. ನಾವು ವರ್ಕ್ ಮಾಡುವುದೂ ಅವರ ಹಿತಾಸಕ್ತಿಗೋಸ್ಕರವೇ ಅಲ್ಲಿ ಕುಳಿತುಕೊಂಡು ಯಾರಿಗೆ ಕೊಡಬೇಕು, ಏನು ಕೊಡಬೇಕೆಂದು ಚರ್ಚೆ ಮಾಡಿ ನಾವು ಕೊಟ್ಟರೆ ಏಕಾಏಕಿ ಇಲ್ಲಿಂದಲೇ ಊರುಗಳ ಡೆವಲಪ್‌ಮೆಂಟ್‌ಗೆ ತೆಗೆದುಕೊಳ್ಳುವುದು, ಇಲ್ಲಿಂದಲೇ ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಇವರಿಗೆ ಯಾರು ಕನೆಕ್ಷನ್ ಇರುತ್ತಾರೆ ಅವರಿಗೇ ಬೆಸಿಫಿಟ್ಸ್ ಕೊಡವ ಸ್ಥಿತಿಯನ್ನು ತಪ್ಪಿಸುತ್ತೀರಾ ಎಂದು ಸಭೆಗೆ ತಾವು ಹೇಳಬೇಕು.

**ಶ್ರೀ ಎಸ್. ಕುಮಾರ್ ಬಂಗಾರಪ್ಪ:** ಮಾನ್ಯ ಉಪಾಧ್ಯಕ್ಷರೆ, ನಾನು ಮೂಲಭೂತವಾಗಿ ಆ ಪ್ರಶ್ನೆಯನ್ನೇ ಎತ್ತಿದ್ದೆ. ಒಂದು guidelines ಇದೆ. ಎಂದರೆ, you follow the guidelines. ಗೈಡ್‌ಲೈನ್ಸ್ ಬಗ್ಗೆ ನಮ್ಮದೇನೂ ಅಭ್ಯಂತರ ಇಲ್ಲ. ಗೈಡ್‌ಲೈನ್ಸ್‌ನಲ್ಲಿ ಜನಸಂಖ್ಯೆ ಆಧಾರ ಎಂದು ಹೇಳಿರುತ್ತಾರೋ ಅಥವಾ ಲಿಸ್ಟ್ ಅನ್ನು ಶಾಸಕರಿಂದ ಪಡೆದುಕೊಳ್ಳಿ ಎಂದು ಹೇಳಿರುತ್ತಾರೋ, ಅದರಲ್ಲಿ ಯಾವ ರೀತಿ ಹೇಳಿರುತ್ತಾರೋ ಅದನ್ನು ಫಾಲೋ ಮಾಡಬೇಕು. ಆದರೆ ಇಲ್ಲಿ ಅದ್ಯಾವುದೂ ಇಲ್ಲ. ಅಲ್ಲಿಂದಲೇ ಕುಳಿತುಕೊಂಡು ಅವರೇ ಪಟ್ಟಿ

ಮಾಡುವುದು ಇಲ್ಲಿ ಆಗುತ್ತಿದೆ. This is not the first time, I am telling you. ಈ ವ್ಯಕ್ತಿ ಎಲ್ಲೇ ಹೋದರೂ ಕೂಡ, ಯಾವುದೇ directorate ಗೆ ಹೋದರೂ ಕೂಡ, he has been doing the same thing. ನಮ್ಮ ತಾಲ್ಲೂಕಿಗೆ ಬರುತ್ತದೆ ಎಂಬ ಬಗ್ಗೆ ನಾನು ಸಂತೋಷ ಪಡುತ್ತೇನೆ. ಏಕೆಂದರೆ ಆ ಗ್ರಾಮದಲ್ಲಿ ಸಮಸ್ಯೆಗಳು ಇರುತ್ತವೆ. But, ಬೇರೆ ಗ್ರಾಮದವರು ನಮ್ಮ ಗ್ರಾಮಕ್ಕೆ ಏಕೆ ಕೊಟ್ಟಿಲ್ಲ ಎಂದು ಗಲಾಟೆ ಮಾಡುವ ರೀತಿಗೆ ಈ ಅಧಿಕಾರಿ ಅವಕಾಶ ಮಾಡಿಕೊಡುತ್ತಿದ್ದಾರೆ. ದಯಮಾಡಿ ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈಗಾಗಲೇ ಮಾನ್ಯ ಸಚಿವರು ಇದರ ಬಗೆಗಿನ ಫೈಲ್ ಅನ್ನು ವಾಪಸ್ ಕಳುಹಿಸಬೇಕೆಂದಿದ್ದಾರೆ. ಆಮೇಲೆ, ಇದರಲಿ ಇನ್ನೊಂದು problem ಏನಾಗುತ್ತದೆ ಎಂದರೆ, ಇದು ಕೇಂದ್ರ ಸರ್ಕಾರದ ಹಣ. ಅದನ್ನು ಇಂತಿಷ್ಟು ದಿನಗಳಲ್ಲಿ ಬಳಸಬೇಕು ಎಂಬ ಟೈಮ್ ಲಿಮಿಟ್ ಇರುತ್ತದೆ. ಈಗ ಅದಕ್ಕೆ ಟೈಮ್ ಇಲ್ಲ. ಆದ್ದರಿಂದ ತಾವು ಇದರ ಬಗೆಗಿನ ಫೈಲ್ ಅನ್ನು ವಾಪಸ್ ಕಳುಹಿಸಿ. ಮತ್ತೆ ಜನಸಂಖ್ಯೆಗೆ ಅನುಗುಣವಾಗಿ ಅದನ್ನು ಮಾಡಬೇಕು. ಈ ಕೆಲಸವನ್ನು ಅವರವರ ದೃಷ್ಟಿಕೋನದಿಂದ, ಅವರೇ ವೈಯಕ್ತಿಕವಾಗಿ ಮಾಡತಕ್ಕಂಥ ಕೆಲಸ ಎಂದು ತಿಳಿದುಕೊಂಡು ಮಾಡಿದ್ದಾರೆ. ಅಂತಹವರ ಮೇಲೆ ಯಾವ ಕ್ರಮವನ್ನು ತಾವು ಕೈಗೊಳ್ಳುತ್ತೀರಿ ಎಂಬುದನ್ನೂ ಕೂಡ ತಾವು ಹೇಳಬೇಕಾಗುತ್ತದೆ. ಇಲ್ಲದಿದ್ದರೆ, ಅವರು ಇದೇ ತರಹ ಮಾಡುತ್ತಲೇ ಹೋಗುತ್ತಿರುತ್ತಾರೆ. ನಾವು ಇದೇ ತರಹವೇ ಎಲ್ಲವನ್ನೂ ನೋಡಿಕೊಂಡು ಇಲ್ಲಿ ಮಾತನಾಡುತ್ತಿರುತ್ತೇವೆ. ನಾನು ಹೋದ ಸಲ ಕೂಡ ವಿಧಾನ ಸಭೆ ನಡೆಯುವಾಗ ಈ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ. ಏಕೆಂದರೆ, I have written a letter to the Minister and to the Principal Secretary. So, I requested them. You kindly take action on these officers who do not respond to the programme. ಆ ತರಹ ಮಾಡುವುದಿಲ್ಲ. ಅವರ ಇಚ್ಛೆಯಾನುಸಾರ ಮಾಡಿಕೊಂಡು ಹೋಗುತ್ತಾರೆ. ಈಗ ಅಲ್ಲಿ ಏನಾಗಿದೆ, ಅಲ್ಲಿ ಆಫೀಸರ್ ಮೇಲೆ ಇದನ್ನು ಯಾವ ರೀತಿಯಲ್ಲೂ ಸಹ ನೀವು ಬದಲಾವಣೆ ಮಾಡಬಾರದು ಎಂದು ಒತ್ತಡ ಹಾಕುತ್ತಿದ್ದಾರೆ, You call for the file. I have given you the entire details. ಎಲ್ಲವನ್ನೂ ಜೆರಾಕ್ಸ್ ಮಾಡಿ ಅವರಿಗೆ ಕೊಟಿದ್ದೇನೆ. ಸೆಕ್ರೆಟರಿ ಮತ್ತು ಮಿನಿಸ್ಟರ್ ಇಬ್ಬರಿಗೂ ಕೂಡ ನಾನು ಕೊಟ್ಟಿದ್ದೇನೆ. He gives a direction, not to change it at any cost. Not to change it at

any cost ಎಂದರೆ, ಇಲ್ಲಿ ಗೈಡ್‌ಲೈನ್ಸ್ ವಾಯ್‌ಲೇಟ್ ಮಾಡುವುದಲ್ಲದೆ, ಕಾರ್ಯಕ್ರಮವನ್ನೂ ಕೂಡ ವಾಯ್‌ಲೇಟ್ ಮಾಡಿದಂತಾಗುತ್ತಿದೆ. Subsequent ಆಗಿ Not to change ಎಂದು orders pass ಮಾಡುವುದು ಎಂದರೆ, What kind of a officer is he? That is not the way an officer should function.

**ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು):** ಮಾನ್ಯ ಉಪಾಧ್ಯಕ್ಷರೆ, ಯಾವುದೇ ಅಧಿಕಾರಿಗಳು ಆಗಲಿ ಅಥವಾ ಮಂತ್ರಿಗಳು ಆಗಲಿ, ನಾವು ಮಾರ್ಗಸೂಚಿಗಳು ಏನಿರುತ್ತವೋ, ಅದರ ಪ್ರಕಾರ ನಡೆದುಕೊಳ್ಳ ಬೇಕಾಗಿರತಕ್ಕಂಥದ್ದು ನಮ್ಮ ಕರ್ತವ್ಯ ಕೂಡ ಆಗಿರುತ್ತದೆ. ಆ ಕಾರಣಕ್ಕಾಗಿ ತಾವು ಹೇಳಿದಂತೆ, ಮಂತ್ರಿಗಳು ಬಂದ ತಕ್ಷಣವೇ, ತಾವೇನು ಆ ಲೋಪದೋಷ ಗಳನ್ನು ಸರಿಪಡಿಸಬೇಕು ಎನ್ನುವುದಕ್ಕೆ ಪತ್ರ ಕೊಟ್ಟಿದ್ದೀರೋ ಮತ್ತು ವಾಪಸ್ ಕಡತ ತರಿಸಿಕೊಳ್ಳಬೇಕೆಂದು ಎಂದು ಹೇಳಿದ್ದೀರೋ, ಅದರ ಪ್ರಕಾರ ಅದನ್ನು ತರಿಸಿಕೊಂಡು, ಇದರ ಬಗ್ಗೆ ನಿಮ್ಮೊಡನೆ ಚರ್ಚೆ ಮಾಡಿ, ಅವರು ಸೂಕ್ತ ನಿರ್ಧಾರ ಮಾಡುತ್ತಾರೆ. ಇದರ ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಬರೇ ಅವರೇನೋ ಪ್ರಶ್ನೆ ಕೇಳಿದರು ಎಂದು ನೀವು ಅದಕ್ಕೆ ಉತ್ತರ ಕೊಡುವುದಲ್ಲ, ಕಾರ್ಯಕ್ರಮ ನಿಜವಾಗಿ ಪ್ರಾಮಾಣಿಕವಾಗಿ ಅನುಷ್ಠಾನವಾಗಬೇಕು ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಂಬಂಧಪಟ್ಟಂತಹ ಈ ಇಲಾಖೆಯ ವಿವಿಧ ಕಾಮಗಾರಿಗಳ ಬಗ್ಗೆ ಹಾಗೂ ಕ್ರಿಯಾ ಯೋಜನೆಯ ಬಗ್ಗೆಯೂ ಕೂಡ ಕ್ರಮ ಕೈಗೊಳ್ಳಲಿಕ್ಕೆ ಒಂದು ಸಭೆಯನ್ನು ಕರೆಯಲಿಕ್ಕೆ ಅವರಿಗೆ ವಿನಂತಿ ಮಾಡಿ, ಅದನ್ನು ಏರ್ಪಾಡು ಮಾಡಿಸುತ್ತೇನೆ.

**(ಆ) ವಿಷಯ: ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ 9ನೇ ತರಗತಿ ಆರಂಭಿಸದಿರುವುದರಿಂದ ಆಗಿರುವ ತೊಂದರೆ ಬಗ್ಗೆ.**

**ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ):** ಮಾನ್ಯ ಉಪಾಧ್ಯಕ್ಷರೆ, ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ 9ನೇ ತರಗತಿ ಆರಂಭಿಸದಿರುವ ಪರಿಣಾಮವಾಗಿ ಆಗಿರತಕ್ಕಂಥ ಅನಾಹುತಗಳು, ಆ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವರಿಸದೇ, ಅತಂತ್ರ ಸ್ಥಿತಿಯಲ್ಲಿರತಕ್ಕಂಥದ್ದು ಮತ್ತು ಸರ್ಕಾರಿ ಶಾಲೆಗಳು ಖಾಸಗಿ ಕಟ್ಟಡಗಳಲ್ಲಿ ನಡೆಸುತ್ತಿರುವುದಕ್ಕೆ ಬಾಡಿಗೆ ಕೊಡದೇ ಅವರು ಬೀಗಮುದ್ರೆ ಹಾಕಿರತಕ್ಕಂಥದ್ದು,